ಮೈಸೂರು ಡಿಸ್ಟ್ರಿಕ್ಟ್ ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ

ದಿವಾಳಿಯಾದ ಡಿಕ್ರೀ ದೇಣೇದಾರ ನಂಜನಗೂಡು ತಾಲ್ಲೂಕು ತಾಯೂರು ಹೋಬಳಿ ಕಲ್‌ಕುಂದದಲ್ಲಿ ಯಿರುವ

ಸುಬ್ಬಂಣನ ವಿಷಯದಲ್ಲಿ—

ಸ್ಯ 1890ನೇ ಇಸವಿ ದಿವಾಳಿ ಕೇಸ್ ನಂಬರ್ 86.

ಹುಕುಂ

ಮೇಲ್ಕಂಡ ಸುಬ್ಬಂಣನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನಾದ ಸುಬ್ಬಂಣನ ಪರವಾಗಿ ಅಡ್ವಿಕೇಟಿ ಮಿಸ್ಟರ್ ನಾರಣಯ್ಯಂಗಾರನ್ನು ಮತ್ತು ಸದರೀಯವನ ಲೇಣೇದಾರ್‌ರಾದ ಖುದ್ದು ಹಾಜರು ಇವರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು, ತಮಗೆ ಈ ದರ್ಯಾಫ್ತು ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಆಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ—1ನೇ ಮೈಸೂರಲ್ಲಿರುವ ಪುಷ್ಪವತಿ ಬ್ಯಾಂಕ್ ಲಿಕ್ವಿಡೇಟರ್ ಸುಬ್ಬಾಯರು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಕಲ್ಕುಂದದ ಸುಬ್ಬಂಣನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ನತ್ತಾಗಿರುವ ಪಟ್ಟಿಯಲ್ಲಿ ಕಂಪ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸ್ಯ 1890ನೇ ಇಸವಿ ಜೆಲೈ 2ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತುನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

	ಲೇಣೇದಾರು, ಅಥವಾ ದಾವಾದಾರ, ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದವರಗಳ ವಾಸಸ್ಥಳ.	ಬೊಜಲಗೆ.	ಯಾವಾಗ ಪೈಕಿ ಟಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರ.
1	ಮೈಸೂರು ಪುಷ್ಪವತಿ ಬ್ಯಾಂಕು ಲಿಕ್ವಿಡೇಟರ್ ಸುಬ್ಬರಾಯರು	9115 6 6	..	ಡಿಕರಿ ಬಾಬತು.	ಡಿ.
2	ನಂಜನಗೂಡು ತಾಲ್ಲೂಕು ಕಲ್ಕುಂದದ ಲಿಂಗಪ್ಪ ..	779 0 0		ಡಿಟೋ	ಡಿ.
	ಜುಮ್ಲಾ ..	9,894 6 6			

ಸಿ. ಶ್ರೀನಿವಾಸಯ್ಯಂಗಾರ್, ಸಬ್ ಜಡ್ಜ್.

ಶಿವಮೊಗ್ಗಾ ಡಿವಿಜ್ಞ.

ಪ್ರಸಿದ್ಧ ಪತ್ರಿಕೆ.

I. ಶಿವಮೊಗ್ಗಾ ಕಸಬಾದಲ್ಲಿ ಪೊಲೀಸ್, ಪೆ ಫಾರೆಸ್ಟ್ ಆಫಿಸ್ ಕೇರಿಸಿ ಕಟ್ಟತಕ್ಕ ಕಾಂಗಾರಿ ಉದ್ದಿಶ್ಯ 1890ನೇ ಇಸವಿ ಜುಲೈ ಮಾಹೆ 30ನೇ ತಾರೀಖು ವರಿವಿಗೂ ದರಖಾಸ್ತುಗಳು ಶಿವಮೊಗ್ಗಾ ಡಿವಿಜ್ಞ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ಪೊತ್ತವನ್ನ ಕಾಣಿಸಲ್ಪಟ್ಟಿರುತ್ತದೆ. ಇದು ನಿಷ್ಕರ್ಷೆಯಾದದ್ದಾಗಿರುವದಿಲ್ಲಾ. ಕಾಂಗಾರಿಯು 1891ನೇ ಇಸವಿ ಜೂನ್ ತಿಂಗಳು ಅಖೈರೊಳಗಾಗಿ ಪೂರೈಸತಕ್ಕದ್ದು.

II. ಪ್ಲಾನ್ ಮತ್ತು ಅಂದಾಜು ಪತ್ರು ವಗೈರೆ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ ಆಫಿಸಿನಲ್ಲಿ ಪ್ರಾತಃಕಾಲ 11 ಘಂಟೆ ಲಾಗಾಯತು ಸಾಯಂಕಾಲ 4 ಘಂಟೆ ವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚು ಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸಿನಲ್ಲಿ ದೊರಿಯುತ್ತವೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಬಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವ ರೇಟ್ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ.

ಕೆಲಸದ ವಿವರ	ಕ್ಕೆ	ಪೊತ್ತ	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ವಪ್ಪುವ ದರ.			
ಮೊಣು ಕೆಲಸ	ಸಲಿಗಜ 1ಕ್ಕೆ	16000				
ಕಲ್ಲು ಕೆಲಸ						

IV. ಪ್ರತಿ ಒಂದು ದರಖಾಸ್ತಿನ ಸಂಗಡಲೂ 200 ರೂಪಾಯಿಗಳ ಕರೆನ್ಸಿ ನೋಟುಗಳಾಗಲಿ, ಗವರ್ನಮೆಂಟ್ ಪ್ರಾಂಸರಿ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನೂ ತೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಖೋಟೆ ಮೇಟೆ ಶಿವಮೊಗ್ಗ ಕಸಬುದಲ್ಲಿ ಕಟ್ಟುತಕ್ಕ ಫಾರೆಸ್ಟ್ ವ, ಪೊಲೀಸ್ ಆಫೀಸ್ ಕಾಂಗಾರಿ ಬಗ್ಗೆ ದರಖಾಸ್ತೆಂಬದಾಗಿ ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನ ತಿರಸ್ಕರಿಸಲ್ಪಾದೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಎಗ್ಜಿಕ್ಯೂಟಿವ್ ಚೀಫ್ ಇಂಜಿನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ವಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲಾ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟ್ ಬಾಂಡ್ ಎಂಬ ಕರಾರು ಪತ್ರವನ್ನ ಬರದುಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದುಮಾಡಲ್ಪಟ್ಟು ತೇವಣಾತಿ ಹಣವನ್ನ ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡ್ ಮೇಲೆ ಬರದು ಚಿಕಟಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬ್ ದೊರಿಯಲಾರದು.

VIII. ಯಾವದಾದರೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವನ್ನ ಅವರಿಗೆ ವಾಪಸ್‌ಮಾಡಲ್ಪಡುತ್ತೆ.

ತಾರೀಖು 15ನೇ ಜುಲೈ ಮಾಹೆ 1890ನೇ ಇಸವಿ.

ತಪಶೀಲ್.

ಕೆಲಸದ ವಿವರ.	ಸಲೆ.	ದರ.
ಕಿಯರಿಂಗ್ ಸೈಟ್	ಮೊತ್ತ	
ಎಕ್ಸ್‌ಕವೇಷನ್	248	
ಪಾಯಖೋದಿ ಮಾಡಿದ ಮಂಣಿನಿಂದ ಮಟ್ಟ ಭರ್ತಿ	153	
ಗಾರೆಯಿಂದ ಕಲ್ಲು ಕೆಲಸ	8,731	
ಸಿಮೆಂಟ್‌ಗಾರೆಯಿಂದ ಕಲ್ಲು ಕಟ್ಟಡ	643	
ಗಾರೆಯಿಂದ ಇಟ್ಟಿಗೆ ಕೆಲಸ	14,082	
ಕರ್ವ್ ಕೆಲಸ ತಾಂಡ್ ಕಾಲಂಮ್ಸ್	1,209	
ಕಾರ್ನಿಸ್ ಕೆಲಸ	458	
ಸಾಗವಾನಿ ಮರದ ಕೆಲಸ	1,019	
10 ಅಂಗುಲ ದಪ್ಪವುಳ್ಳ ಸಾಗವಾನಿ ಮರದ ಆರ್ನಮೆಂಟಿಲ್ ಈಲ್‌ಬೋರ್ಡ್‌ಸ್	222	
8 ಡಿಟೋ ಡಿಟೋ ಡಿಟೋ	172	
ಸಾಗವಾನಿ ಮರದಿಂದ ಸ್ಟೇರ್ ಕೇಸ್	ಮೊತ್ತ	
ಕಾರ್ಪೆಂಟ್ ಕೆಲಸ	1,567	
ಕಾರ್ಪೆಂಟುಬೆಡ್ ಮೇಲೆ ಕಲ್ಲು ಹಾಸು ಆಸ್ ಫಾಲ್ಟಿನಿಂದ ಸಂದುಗಾರೆ	1,469	
ಜಪ್ಪಡಿಗಳು	525	
ಸಾಗವಾನಿ ನಾಟಾ ರೀಫರ್ಸ್ 1ನೇ ತರಗದಿ ಮಂಗಳೂರು ರೀಹೆಂಜು ವುಪಯೋಗಿಸಿಕೊಂಡು ರು		
ಫಿಂಗ್ ಕೆಲಸ	36·99	
ಸಾಗವಾನಿನಾಟಾದ ಪ್ಯಾರಲೆಡ್ ವ, ಗ್ಲೇಜಡ್ ಬಾಗಲುಗಳು	385	
ಸಾಗವಾನಿ ಮರದ ಕಿಟಿಕಿಗಳು ಡಬಲ್ ಪೇಟರ್ಸ್ ಸಹ	310	
ಡಿಟೋ ಮರದಿಂದ ಗ್ಲೇಜಡ್‌ಮೆಂಟ್ ಲೆಟರ್ಸ್	76	
ಡಿಟೋ ಮರದಿಂದ ಬ್ಯೂಂಗಾಲ್ ಬ್ಯಾಟಂಡ್ ಬಾಗಲು	54	
ಡಿಟೋ ಡಿಟೋ ಕಿಟಕಿಗಳು ಕಬ್ಬಿಣದ ಸಲಾಕಿ ಸಹ	53	
ಡಿಟೋ ಮರದ ಗೇಟು	1	
ಟೂರ್ ಹಚ್ಚುವದು	15·00	
ಬಂಣಬಳಿಯುವದು (ವೈಟಿಂಗ್)	8·00	
ಮರಕ್ಕೆ ಯಂತ್ರ ಹಚ್ಚುವದು	5,000	
ಗಾರೆಯಿಂದ ಗಿಲಾವ್ ಮಾಡುವದು	194·03	
ಗಾರೆಯಿಂದ ವಯಿಟಿಂಗ್ ಕೆಲಸ	5·75	
ವೈಟ್ ಮತ್ತು ಕಲರ್ ವಾಷಿಂಗ್	194·03	

ಎ. ಎಸ್. ನಗವಕಾರ್,
ಎಗ್ಜಿಕ್ಯೂಟಿವ್ ಇಂಜಿನಿಯರ್.